ಓಂ ಶಾಂತಿ, ಬಾಪ್‌ದಾದಾ, ರಿವೈಸ್ ಕೋರ್ಸ್/ಅವ್ಯಕ್ತ ಮುರಳಿ 16-02-1978

# *ಮಾಯೆ ಹಾಗೂ ಪ್ರಕೃತಿಯ ಮುಖಾಂತರ ಸತ್ಕಾರವನ್ನು ಪ್ರಾಪ್ತಿ ಮಾಡಿಕೊಳ್ಳುವ ಆತ್ಮರೇ ಸರ್ವಶ್ರೇಷ್ಠ ಆತ್ಮರಾಗಿದ್ದಾರೆ*

(माया और प्रकृति द्वारा सत्कार प्राप्त आत्मा ही सर्वश्रेष्ठ आत्मा है)

**ಶಿವಪರಮಾತ್ಮ ಈ ಭೂಮಿಯ ಮೇಲೆ ಅವತರಿಸಿ ಜ್ಞಾನ, ಯೋಗಗಳಿಂದ ಧರ್ಮಸ್ಥಾಪನೆಯನ್ನು ಮಾಡುತ್ತಿದ್ದಾರೆ.**

ಮುರಳಿಯನ್ನು ಓದಬೇಕಾದರೆ ಆತ್ಮಿಕ ಸ್ಥಿತಿಯಲ್ಲಿದ್ದು ತಂದೆಯೊಂದಿಗೆ ಶಿಕ್ಷಕನ ಸಂಬಂಧವನ್ನು ಜೋಡಿಸಿ ಈಶ್ವರೀಯ ವಿದ್ಯಾರ್ಥಿಯ ಸ್ಥಿತಿಯಲ್ಲಿದ್ದು ಮಹಾವಾಕ್ಯಗಳನ್ನು ಆತ್ಮಕ್ಕೆ ಅನ್ವಯಿಸಿಕೊಂಡು ಓದಿದಾಗ ಮುರಳಿ ಅರ್ಥವಾಗುತ್ತದೆ. ಅದಕ್ಕಾಗಿ ನಾವು ಮಾಡಬೇಕಾಗಿರುವ ಸಂಕಲ್ಪಗಳು.

• ನಾನಾತ್ಮ ನಿರಾಕಾರ ಜ್ಯೋತಿರ್ಬಿಂದು ಸ್ವರೂಪ ಶಿವಪರಮಾತ್ಮನನ್ನ ತಂದೆ.

• ನಾನು ಈಶ್ವರೀಯ ವಿದ್ಯಾರ್ಥಿ, ಶಿವ ಪರಮಾತ್ಮ ನನಗೆ ಟೀಚರ್ ಅಥವಾ ಶಿಕ್ಷಕ.

• ಶಿವಪರಮಾತ್ಮ ನನಗೆ ಸದ್ಗುರು, ನಾನು ಮಾಸ್ಟರ್ ಸದ್ಗುರು.

• ಶಿವಪರಮಾತ್ಮ ನನಗೆ ಜೀವನ ಸಂಗಾತಿ, ನಾನು ಶಿವ ಪರಮಾತ್ಮನಿಗೆ ಜೀವನ ಸಂಗಾತಿ.

**ವಿಶ್ವದ ರಾಜ್ಯ ಭಾಗ್ಯವನ್ನು ಪ್ರಾಪ್ತಿ ಮಾಡಿಸುವರು, ಮಾಯೆ ಮತ್ತು ಪ್ರಕೃತಿಯಿಂದಲೂ ಸತ್ಕಾರ ಯೋಗ್ಯ ಸರ್ವಶ್ರೇಷ್ಠ ಆತ್ಮರನ್ನಾಗಿ ತಯಾರು ಮಾಡುವವರು, ದಯಾಸಾಗರನಾದ ಶಿವತಂದೆ ಹೇಳಿದರು.**

ಇಂದು ಬಾಪ್‌ದಾದಾರವರು ಪ್ರತಿಯೊಂದು ಮಗುವಿನ ನಯನಗಳಲ್ಲಿ, ಮಸ್ತಕದ ರೇಖೆಗಳಿಂದ ವಿಶೇಷವಾದ ಮಾತನ್ನು ನೋಡುತ್ತಿದ್ದಾರೆ. ಅದೇನಾಗಿರಬಹುದು ಎಂದು ತಿಳಿದಿದ್ದೀರಾ? 21 ಜನ್ಮಗಳಿಗೆ ತಂದೆಯಿಂದ ಏನೇನು ಪ್ರಾಪ್ತಿಯಾಗುತ್ತದೆಯೆಂದು ಪರಿಚಯವನ್ನು ಕೊಡಬೇಕಾದರೆ ತಿಳಿಸುತ್ತೀರಲ್ಲವೆ. 'ಚಾಲೆಂಜ್ ಮಾಡುತ್ತೀರಲ್ಲವೇ? ಎವರ್‌ಹೆಲ್ದಿ(ಸದಾ ಆರೋಗ್ಯ), ಎವರ್‌ವೆಲ್ದಿ(ಸದಾ ಸಂಪನ್ನ), ಎವರ್ ಹ್ಯಾಪಿ(ಸದಾ ಸಂತೋಷ). ಈ ಮೂರೂ ಪ್ರಾಪ್ತಿಗಳು ವರ್ತಮಾನ ಸಮಯದ ಪ್ರಾಪ್ತಿಯ ಲೆಕ್ಕಾಚಾರದಿಂದಲೇ 21 ಜನ್ಮಗಳಿಗಾಗಿ ಸಿಗುತ್ತದೆ. ಇಂದು ಬಾಪ್‌ದಾದಾರವರು ಪ್ರತಿಯೊಬ್ಬರ ಪ್ರಾಪ್ತಿಯ ರೇಖೆಗಳನ್ನು ಮಸ್ತಕ ಹಾಗೂ ನಯನಗಳ ಮುಖಾಂತರ ನೋಡುತ್ತಿದ್ದಾರೆ. ಇಲ್ಲಿಯತನಕವೂ ಚಾಲೆಂಜ್ ಗನುಸಾರವಾಗಿ 'ಸದಾ' ಶಬ್ದವು ಎಲ್ಲಿಯವರೆಗೆ ಪ್ರತ್ಯಕ್ಷದಲ್ಲಿ ಬಂದಿದೆಯೆಂದು ನೋಡುತ್ತಿದ್ದಾರೆ. ಸದಾ ಆರೋಗ್ಯ, ಸದಾ ಸಂಪನ್ನ ಎಂದು ಕೇವಲ ಚಾಲೆಂಜ್ ಮಾಡುವುದಿಲ್ಲ ಆದರೆ ಸದಾ ಅರ್ಥಾಥ್ ಸದಾ ಆರೋಗ್ಯ, ಸದಾ ಸಂಪನ್ನ ಎಂದು ಹೇಳುತ್ತೀರಿ. ಮೊದಲು ವರ್ತಮಾನ ಹಾಗೂ ವರ್ತಮಾನದ ಆಧಾರದಿಂದ ಭವಿಷ್ಯ. ಆದ್ದರಿಂದ ಸದಾ ಶಬ್ದವನ್ನು ಅಂಡರ್‌ಲೈನ್ ಮಾಡುತ್ತಾ, ಅದರ ಫಲಿತಾಂಶವನ್ನು ನೋಡುತ್ತಿದ್ದಾರೆ. ಫಲಿತಾಂಶವೇನಾಗಿರಬಹುದು? ಈ ಮಾತು ವರ್ತಮಾನದ್ದಾಗಿದೆಯೇ ಅಥವಾ ಭವಿಷ್ಯದ್ದಾಗಿದೆಯೇ? ಸೇವೆಯ ಬಗ್ಗೆ ಇಂತಹ ಸ್ಥಿತಿಯ ಅವಶ್ಯಕತೆಯು ಭವಿಷ್ಯಕ್ಕಾಗಿ ಬೇಕಾಗಿದೆಯೋ ಅಥವಾ ವರ್ತಮಾನಕ್ಕಾಗಿ ಬೇಕಾಗಿದೆಯೋ? ಒಂದೇ ಸಮಯದಲ್ಲಿ ತನು, ಮನ,

ಧನ, ಮನಸಾ-ವಾಚಾ-ಕರ್ಮಣಾ, ಸರ್ವಪ್ರಕಾರದ ಸೇವೆಯು ಜೊತೆಜೊತೆಯಲ್ಲಿದ್ದಾಗ ಸಹಜ ಸಫಲತೆಯೂಪ್ರಾಪ್ತಿ ಆಗುತ್ತದೆ. ಇಂತಹ ಸ್ಥಿತಿಯ ಅನುಭವವಾಗುತ್ತಿದೆಯೇ? ಹೇಗೆ ಶರೀರದ ವ್ಯಾಧಿ, ಸೀಜನ್ನಿನ ಪ್ರಭಾವ, ವಾತಾವರಣದ ಪ್ರಭಾವ ಆಹಾರ-ಪಾನೀಯಗಳ ಪ್ರಭಾವ, ಕಾಯಿಲೆಯ ಪ್ರಭಾವದಲ್ಲಿ ಬಂದು ಬಿಡುತ್ತೀರಿ, ಅದೇರೀತಿ ಮನಸ್ಸಿನ ಮೇಲೆಯೂ ಪ್ರಭಾವ ಬೀರುತ್ತದೆ. ಸದಾ ಆರೋಗ್ಯಕ್ಕೆ ಬದಲಾಗಿ ರೋಗಿಯಾಗಿ ಬಿಡುತ್ತೀರಿ ಆದರೆ ಯಾರು ಸದಾ ಆರೋಗ್ಯವಾಗಿರುತ್ತಾರೆಯೋ ಅವರು ಇವೆಲ್ಲಾ ಮಾತುಗಳಲ್ಲಿಯೂ ತಿಳುವಳಿಕೆಯಿರುವ ಕಾರಣರ ಸುರಕ್ಷಿತವಾಗಿರುತ್ತಾರೆ. ಈ ರೀತಿ ಸದಾ ಆರೋಗ್ಯ ಅರ್ಥಾತ್ ಸರ್ವಶಕ್ತಿಗಳ ಖಜಾನೆಯಿಂದ, ಸರ್ವಗುಣಗಳ ಖಜಾನೆಯಿಂದ, ಜ್ಞಾನದ ಖಜಾನೆಯಿಂದ ಸಂಪನ್ನವಾಗಿರುತ್ತಾರೆ. ನಾನೇನು ಮಾಡಲಿ, ಹೇಗೆ ಮಾಡಲಿ, ಬಯಸುತ್ತಿದ್ದರೂ ಮಾಡಲು ಆಗುತ್ತಿಲ್ಲ. ಎಂದೂ ಸಹ ಈ ರೀತಿಯಾದ ನಿರ್ಧನಿಕವಾದ ಮಾತು ಅಥವಾ ಸಂಕಲ್ಪವನ್ನು ಶಕ್ತಿಯರು ಮಾತನಾಡಲು ಸಾಧ್ಯವಿಲ್ಲ. ಸ್ವಯಂನ್ನು ಸದಾ ಸಂಪನ್ನ ಮೂರ್ತಿಯೆಂದು ಅನುಭವ ಮಾಡುತ್ತೀರಿ ಮತ್ತು ಅನ್ಯ ನಿರ್ಧನಿಕ ಆತ್ಮರೂ ಸಹ ಸ್ವಯಂನ್ನು ಸಂಪನ್ನ ಮೂರ್ತಿಯನ್ನಾಗಿ ನೋಡುತ್ತಾ, ಸಂಪನ್ನತೆಯ ಛತ್ರಛಾಯೆಯಲ್ಲಿರುವಂತೆ ನೋಡುತ್ತಾ ಉಮ್ಮಂಗ-ಉತ್ಸಾಹದ ಅನುಭವವನ್ನೂ ಮಾಡುತ್ತಾರೆ. ಅದೇರೀತಿ ಎವರ್ ಹ್ಯಾಪಿ ಅರ್ಥಾತ್ ಸದಾ ಖುಷಿಯಾಗಿರುವುದು, ಯಾವುದೇ ರೀತಿಯಾದ ದುಃಖದ ಅಲೆಯನ್ನು ಉತ್ಪನ್ನಮಾಡುವ ವಾತಾವರಣ ವಿದ್ದರೂ ಸಹ, ನೀರಸ ವಾತಾವರಣವಿದ್ದರೂ, ಅಪ್ರಾಪ್ತಿಯ ಅನುಭವ ಮಾಡಿಸುವ ವಾತಾವರಣವಿದ್ದರೂ ಸಹ ಸದಾ ಸಂತೋಷವಾಗಿರುತ್ತಾರೆ ಹಾಗೂ ಸೂರ್ಯನು ಅಂಧಕಾರವನ್ನು ಪರಿವರ್ತನೆ ಮಾಡುವಂತೆಯೇ ತಮ್ಮಸಂತೋಷದ ಹೊಳಪಿನಿಂದ ದುಃಖ ಹಾಗೂ ಉದಾಸಿಯ ವಾತಾವರಣವನ್ನೂ ಪರಿವರ್ತನೆ ಮಾಡಿಬಿಡುತ್ತಾರೆ. ಸದಾ ಸಂತೋಷ ಅರ್ಥಾತ್ ಅಂಧಕಾರದ ಮಧ್ಯದಲ್ಲಿಯೂ ಬೆಳಕನ್ನು ತರುವುದು, ಅಶಾಂತಿಯ ಮಧ್ಯದಲ್ಲಿ ಶಾಂತಿಯನ್ನು ತರುವುದು, ನೀರಸ ವಾತಾವರಣದಲ್ಲಿ ಸಂತೋಷ ಹೊಳಪನ್ನು ತರುವುದಾಗಿದೆ. ಇಂತಹ ಸೇವೆಯ ಅವಶ್ಯಕತೆಯು ವರ್ತಮಾನದಲ್ಲಿದೆ, ಭವಿಷ್ಯದಲ್ಲಿಲ್ಲ. ಇಂದು ಬಾಪ್‌ದಾದಾರವರು ಪ್ರತಿಯೊಬ್ಬರ ಪ್ರಾಪ್ತಿಯ ರೇಖೆಯು ಸದಾಕಾಲ ಹಾಗೂ ಸ್ಪಷ್ಟವಾಗಿದೆಯೇ ಎಂದು ನೋಡುತ್ತಿದ್ದರು. ಹೇಗೆ ಹಸ್ತದ ಮುಖಾಂತರ ಆಯಸ್ಸು ದೀರ್ಘವಾಗಿದೆಯೇ? ನಿರೋಗಿಯಾಗಿದೆಯೇ ಎಂದು ಆಯಸ್ಸಿನ ರೇಖೆಯನ್ನು ನೋಡುತ್ತಾರಲ್ಲವೇ, ಅದೇ ರೀತಿ ಬಾಪ್‌ದಾದಾರವರು ರೇಖೆಗಳನ್ನು ನೋಡುತ್ತಿದ್ದರು. ಮೂರೂ ಪ್ರಾಪ್ತಿಗಳು ಜನ್ಮವಾದಾಗಿನಿಂದ ಇಲ್ಲಿಯವರೆಗೂ ಅಖಂಡವಾಗಿದೆಯೇ ಅಥವಾ ಮಧ್ಯ- ಮಧ್ಯದಲ್ಲಿ ರೇಖೆಯು ಖಂಡಿತವಾಗಿದೆಯೇ? ಬಹಳ ಕಾಲಕ್ಕಾಗಿ ಇದೆಯೇ 'ಅಥವಾ ಅಲ್ಪ ಕಾಲಕ್ಕಾಗಿ ಇದೆಯೇ? ಫಲಿತಾಂಶದಲ್ಲಿ ಅಖಂಡ ಹಾಗೂ ಸ್ಪಷ್ಟತೆಯ ಕೊರತೆಯನ್ನು ನೋಡಿದರು. ಬಹಳ ಕಡಿಮೆಯಿದ್ದರು, ಅದರಲ್ಲಿ ಅಖಂಡವಾಗಿತ್ತು. ಅಖಂಡವಾಗಿದ್ದರೂ ಸ್ಪಷ್ಟವಾಗಿರಲಿಲ್ಲ. ಇಲ್ಲದಿರುವುದಕ್ಕೆ ಸಮಾನವಾಗಿದೆ. ಆದರೆ ಕಳೆದದ್ದು ಕಳೆದುಹೋಯಿತು. ವರ್ತಮಾನ ಸಮಯದಲ್ಲಿ ವಿಶ್ವದ ಸೇವೆಯ ಸ್ಟೇಜಿನ ಮೇಲೆ ಹೀರೋ- ಹೀರೋಯಿನ್ ಪಾತ್ರವನ್ನು ಅಭಿನಯಿಸುತ್ತಿದ್ದೀರಲ್ಲವೆ. ಅದರನುಸಾರವಾಗಿಯೇ ಈ ಮೂರೂ ಪ್ರಾಪ್ತಿಗಳೂ ಸಹ ಸದಾಕಾಲ ಮಸ್ತಕ ಹಾಗೂ ನಯನಗಳ ಮುಖಾಂತರ ಸ್ಪಷ್ಟವಾಗಿ ಕಂಡು ಬರಬೇಕಾಗಿದೆ. ಈ ಮೂರೂ ಪ್ರಾಪ್ತಿಗಳ ಆಧಾರದಿಂದಲೇ ವಿಶ್ವಕಲ್ಯಾಣಕಾರಿಯ ಪಾತ್ರವನ್ನು ಅಭಿನಯಿಸಬಹುದು. ಇಂದು ಈ ಮೂರೂ ಪ್ರಾಪ್ತಿಗಳ ಅವಶ್ಯಕತೆಯು ಸರ್ವ ಆತ್ಮರಿಗೂ ಇದೆ. ಇಂತಹ ಅಪ್ರಾಪ್ತ ಆತ್ಮರಿಗೂ ಸಹ ಪ್ರಾಪ್ತಿ ಮಾಡಿಸಿ, ಚಾಲೆಂಜ್‌ನ್ನು ಪ್ರತ್ಯಕ್ಷದಲ್ಲಿ ತರಬೇಕು. ದುಃಖಿ-ಅಶಾಂತ ಆತ್ಮರು, ರೋಗಿ ಆತ್ಮರು, ಶಕ್ತಿಹೀನ ಆತ್ಮರೆಲ್ಲರೂ ಒಂದು ಕ್ಷಣದ ಪ್ರಾಪ್ತಿಯ ಹನಿಗಾಗಿ ಅಥವಾ ಒಂದು ಹನಿಗಾಗಿ ಬಾಯಾರಿದ್ದಾರೆ. ತಮ್ಮ ಸಂತೋಷದ ಅದೃಷ್ಟದ ಸ್ಥಿತಿಯು ಸದಾ ಸಂತೋಷ/ಖುಷಿ ಅರ್ಥಾತ್ ಹರ್ಷಿತ ಮುಖದ ಚಹರೆಯನ್ನು ಕಂಡು, ಅವರ ಜೀವನದಲ್ಲಿ ಅರ್ಥಾತ್ ಮಾನವನ ಜೀವನದಲ್ಲಿ ಜೀವಿಸುವುದು ಏನಾಗಿದೆ ಎನ್ನುವುದರ ಧೈರ್ಯ ಹಾಗೂ ಉಮ್ಮಂಗ-ಉತ್ಸಾಹವು ಬರುತ್ತದೆ. ಈಗ ಬದುಕಿದ್ದರೂ ಸಹ ಭರವಸೆಹೀನ, ಚಿಂತೆಯಲ್ಲಿ ಕುಳಿತಿದ್ದಾರೆ. ಅಂತಹ ಆತ್ಮರನ್ನೂ ಸಹ ಮರುಜೀವಾ ಮಾಡಿಸಿ, ಹೊಸ ಜೀವನದ ದಾನ ಕೊಡಿ ಅರ್ಥಾತ್ ಮೂರೂ ಪ್ರಾಪ್ತಿಗಳಿಂದ ಸಂಪನ್ನಗೊಳಿಸಿ, ಸದಾ ಸ್ಮೃತಿಯಲ್ಲಿರಲಿ- ಈ ಮೂರೂ ಪ್ರಾಪ್ತಿಗಳೂ ನಮ್ಮ ಜನ್ಮಸಿದ್ಧ ಅಧಿಕಾರವಾಗಿದೆ. ಈ ಮೂರರಪ್ರತ್ಯಕ್ಷ ಧಾರಣೆಗಾಗಿ ಡಬಲ್ ಅಂಡರ್‌ಲೈನ್ ಮಾಡಿಕೊಳ್ಳಬೇಕು, ಪ್ರಭಾವ ಬೀರುವವರಾಗಬೇಕು.

ಪ್ರಕೃತಿ ಅಥವಾ ವಾತಾವರಣದ ಯಾವುದೇ ಪ್ರಭಾವದಲ್ಲಿಯೂ ವಶರಾಗಬಾರದು. ಹೇಗೆ ಕಮಲ ಪುಷ್ಪವು ಕೆಸರು ಹಾಗೂ ನೀರಿನ ಪ್ರಭಾವದಲ್ಲಿ ಬರುವುದಿಲ್ಲ. ಅದು ಈ ರೀತಿ ಆಗುತ್ತಿರುತ್ತದೆ, ಇಷ್ಟಂತು ಖಂಡಿತವಾಗಿಯೂ ಆಗಬೇಕು, ಈ ರೀತಿ ಯಾರಾದರೂ ಆಗಿದ್ದಾರೆಯೇ ಎನ್ನುವಂತಹ ಪ್ರಭಾವದಲ್ಲಿ ಬರಬಾರದು. ಭಲೆ ಯಾರೇ ಆಗದಿರಬಹುದು ಆದರೆ ತಾವು ಆ ರೀತಿ ಆಗಿ ತೋರಿಸಿರಿ. ನಾವು ಮೊದಲನೇ ನಂಬರಿನಲ್ಲಿ ಬಂದು ತೋರಿಸುತ್ತೇವೆ, ವಿಶ್ವ ಮಹಾರಾಜನಾಗಿ ತೋರಿಸುತ್ತೇವೆಂದು ಯಾವ ರೀತಿ ಶುದ್ಧ ಸಂಕಲ್ಪವನ್ನಿಡುತ್ತೀರಿ, ಹಾಗೆಯೇ ವರ್ತಮಾನ ಸಮಯದಲ್ಲಿ ಮೊದಲು ನಾನು ಆಗಬೇಕಾಗಿದೆ. ತಂದೆಯನ್ನು ಫಾಲೋ ಮಾಡುತ್ತಾ ನಂಬರ್‌ವನ್‌ನ ಉದಾಹರಣೆಯಾಗಿ ತೋರಿಸಬೇಕು - ಇಂತಹ ಲಕ್ಷ್ಯವನ್ನಿಡಬೇಕು. ಲಕ್ಷ್ಯದ ಜೊತೆಜೊತೆಯಲ್ಲಿ ಲಕ್ಷಣವನ್ನೂ ಧಾರಣೆ ಮಾಡುತ್ತಿರಬೇಕು. ಇದರಲ್ಲಿ ಮೊದಲು ನಾನಾಗಬೇಕು ಎನ್ನುವ ಧೃಡಸಂಕಲ್ಪವನ್ನಿಡಬೇಕು, ಇದರಲ್ಲಿ ಅನ್ಯರನ್ನು ನೋಡಬಾರದು. ಸ್ವಯಂನ್ನು ನೋಡಿಕೊಳ್ಳಬೇಕು ಹಾಗೂ ತಂದೆಯನ್ನು ನೋಡಿದಾಗಲೇ ಚಾಲೆಂಜ್ ಮತ್ತು ಪ್ರ್ಯಾಕ್ಟಿಕಲ್ ಸಮಾನವಾಗಿರುತ್ತದೆ. ಒಳ್ಳೆಯದು - ಬಹಳಷ್ಟು ತಿಳಿಸಲಾಗಿದೆ ಮತ್ತು ಬಹಳಷ್ಟು ಕೇಳಿದಿರಿ. ಈ ಬಾರಿಯಂತು ಬಾಪ್‌ದಾದಾರವರು ಕೇವಲ ತಿಳಿಸುವುದಕ್ಕಾಗಿ ಬಂದಿಲ್ಲ. ನೋಡುವುದಕ್ಕಾಗಿ ಬಂದಿದ್ದಾರೆ. ಏನು ನೋಡಿದರು ಅದನ್ನು ತಿಳಿಸುತ್ತಿದ್ದಾರೆ. ತಂದೆಯು ತಿಳಿದಿದ್ದಾರೆ- ಈ ಆತ್ಮರಿಂದಲೇ ಆಗಬೇಕು. ಏಕೆಂದರೆ ತಾವೇ ಅಧಿಕಾರಿ ಆತ್ಮರಾಗಿದ್ದೀರಲ್ಲವೆ! ಆದರೆ ಈ ಮಾತನ್ನು ಮತ್ತೆ-ಮತ್ತೆ ಸ್ಮೃತಿ ಕೊಡುತ್ತಿದ್ದಾರೆ. ಒಳ್ಳೆಯದು-

**ಈ ರೀತಿ ವಿಶ್ವದ ರಾಜ್ಯಭಾಗ್ಯದ ಅಧಿಕಾರಿ, ತಂದೆಯ ಮೂಲಕ ಸರ್ವಪ್ರಾಪ್ತಿಗಳ ಅಧಿಕಾರಿಗಳು, ಮಾಯೆ ಹಾಗೂ ಪ್ರಕೃತಿಯ ಮೂಲಕ ಸತ್ಕಾರವನ್ನು ಪಡೆದುಕೊಳ್ಳುವ ಅಧಿಕಾರಿ, ಇಂತಹ ಸರ್ವಶ್ರೇಷ್ಠ ಆತ್ಮರಿಗೆ ಬಾಪ್‌ದಾದಾರವರ ನೆನಪು-ಪ್ರೀತಿ ಹಾಗೂ ನಮಸ್ತೆ.**

**ಪಾರ್ಟಿಯೊಂದಿಗೆ:- (ಆಸ್ಟ್ರೇಲಿಯಾ)**

ಸರ್ವೀಸೇಬಲ್ ಆಗಿರುವಿರಲ್ಲವೇ? ಸರ್ವೀಸೇಬಲ್ ಅರ್ಥಾತ್ ಪ್ರತೀ ಸಂಕಲ್ಪ, ಮಾತು ಹಾಗೂ ಕರ್ಮವೂ ಸರ್ವೀಸ್‌ನಲ್ಲಿ ಜೊತೆಜೊತೆಯಲ್ಲಿ ತೊಡಗಿರುವವರಾಗಿದ್ದಾರೆ. ತ್ರಿಮೂರ್ತಿ ತಂದೆಯ ಮಕ್ಕಳಾಗಿದ್ದೀರಲ್ಲವೇ? ಅಂದಾಗ ಮೂರೂ ಸೇವೆಗಳು ಜೊತೆಜೊತೆಯಲ್ಲಿ ಆಗುತ್ತಿರಬೇಕು. ಒಂದೇ ಸಮಯದಲ್ಲಿ ಮೂರೂ ಸೇವೆಗಳೂ ಆಗುತ್ತಿರಬೇಕು, ಆಗ ಪ್ರತ್ಯಕ್ಷಫಲವನ್ನು ತೆಗೆಯಬಹುದು. ಈ ಮೂರೂ ಸೇವೆಗಳು ಜೊತೆಜೊತೆಯಲ್ಲಿಯೇ ನಡೆಯುತ್ತಿದೆಯೇ? ಮನಸಾ ಮೂಲಕ ಆತ್ಮರನ್ನು ತಂದೆಯೊಂದಿಗೆ ಬುದ್ಧಿಯೋಗ ಜೋಡಿಸುವ ಸೇವೆ, ವಾಣಿಯ ಮೂಲಕ ತಂದೆಯ ಪರಿಚಯವನ್ನು ಕೊಡುವ ಸೇವೆ ಹಾಗೂ ಕರ್ಮದ ಮೂಲಕ ದಿವ್ಯಗುಣ ಮೂರ್ತಿಯಾಗುವ ಸೇವೆ, ಅಂದ ಮೇಲೆ ಈ ಮುಖ್ಯವಾದ ಸಬ್ಜೆಕ್ಟ್- ಯೋಗ, ಜ್ಞಾನ ಹಾಗೂ ದಿವ್ಯಗುಣ ಮೂರೂ ಜೊತೆಜೊತೆಯಲ್ಲಿರಲಿ. ಏಕೆಂದರೆ ಪ್ರತೀಕ್ಷಣದಲ್ಲಿಯೂ ಶಕ್ತಿಶಾಲಿ ಸೇವೆ ಮಾಡುವವರು ಅರ್ಥಾತ್ ಮಿನಿಟ್ ಮೋಟಾರು ಎಂದು ಗಾಯನವಿದೆ. ಒಂದು ಕ್ಷಣದಲ್ಲಿ ಮರುಜೀವಾ ಆಗುವ ಸ್ಟ್ಯಾಂಪ್ ಹಾಕಬಲ್ಲಿರಾ! ಇದು ಅಂತಿಮ ಸೇವೆಯ ರೂಪವಾಗಿದೆ. ಈಗ ವಾಣಿಯ ಮೂಲಕ ತಿಳಿಸುತ್ತೀರೆಂದರೆ ಬಹಳ ಒಳ್ಳೆಯದು ಎಂದು ಹೇಳುತ್ತಾರೆ. ಆದರೆ ಸ್ವಯಂ ಒಳ್ಳೆಯವರಾಗುವುದಿಲ್ಲ. ಮನಸಾ-ವಾಚಾ-ಕರ್ಮಣಾ ಮೂರೂ ಸೇವೆ ಒಟ್ಟಿಗೆ ಆದಾಗ ಬಹಳ ಚೆನ್ನಾಗಿದೆ ಎಂದು ಹೇಳುವುದಿಲ್ಲ ಆದರೆ ಸ್ವಯಂ ಪ್ರಾಕ್ಟಿಕಲ್ ಆಗಿದ್ದು ತೋರಿಸಬೇಕೆನ್ನುವ ಅನುಭವದಲ್ಲಿ ಬರುತ್ತಾರೆ. ಈ ರೀತಿ ಸರ್ವೀಸೇಬಲ್ ಆಗಿರಿ. ಇದಕ್ಕೆ ವರದಾನಿ ಹಾಗೂ ಮಹಾದಾನಿ ಸ್ಥಿತಿಯೆಂದು ಹೇಳಲಾಗುತ್ತದೆ. ಸರ್ವೀಸಿನ ಉಮ್ಮಂಗ-ಉತ್ಸಾಹವು ಚೆನ್ನಾಗಿದೆ. ಇಂತಹ ಯೋಗ್ಯಮಕ್ಕಳನ್ನು ನೋಡಿ ತಂದೆಗೂ ಖುಷಿಯಾಗುತ್ತದೆ. ಈಗ ದಿವ್ಯಗುಣಗಳ ಶೃಂಗಾರವನ್ನು ಬಹಳ ಹೆಚ್ಚಾಗಿ ಮಾಡಿಕೊಳ್ಳಬೇಕು. ಮರ್ಯಾದೆಗಳ ಗೆರೆಯೊಳಗೆ ಇರುತ್ತಾ ಮರ್ಯಾದಾ ಪುರುಷೋತ್ತಮನ ಟೈಟಲ್‌ನ್ನು ಪಡೆಯುವ ಗಮನವಿದೆ. ಅಂದಮೇಲೆ ಈ ಕಿರೀಟ ಹಾಗೂ ತಿಲಕವನ್ನು ಗಮನವಿಡುತ್ತಾ ಧಾರಣೆ ಮಾಡಿಕೊಳ್ಳಬೇಕು.

2. ಸದಾ ಪ್ರತಿಯೊಂದು ಕರ್ಮವನ್ನು ಮಾಡುತ್ತಿದ್ದರೂ ಸಹ ಪಾತ್ರಧಾರಿಯಾಗಿರುತ್ತಾ ಕರ್ಮವನ್ನು ಮಾಡುತ್ತಿದ್ದೀರಾ? ತಮಗೆ ತಾವೇ ಸಾಕ್ಷಿಯಾಗಿದ್ದು, ಪರಿಶೀಲನೆ ಮಾಡಿಕೊಳ್ಳಿರಿ- ಏನೆಲ್ಲಾ ಪಾತ್ರವನ್ನು ಅಭಿನಯಿಸಿದೆವೋ ಅದೆಲ್ಲವೂ ಯಥಾರ್ಥ ಅಥವಾ

ಮಹಿಮಾಯೋಗ್ಯ ಚರಿತ್ರೆಯ ರೂಪದಲ್ಲಿತ್ತೇ? ಶ್ರೇಷ್ಠಕರ್ಮದ ಮಹಿಮೆಯೇ ಸದಾ ಆಗುತ್ತದೆ. ಪಾತ್ರಧಾರಿಯಾಗಿದ್ದು ಪಾತ್ರವನ್ನಭಿನಯಿಸಿರಿ, ನಂತರ ಜೊತೆಗಾರನಾಗಿ ಪರಿಶೀಲನೆ ಮಾಡಿಕೊಳ್ಳಿರಿ- ಈ ಪಾತ್ರವು ಮಹಾನ್ ಆಗಿತ್ತೇ ಅಥವಾ ಸಾಧಾರಣವಾಗಿತ್ತೇ? ಜನ್ಮವೇ ಅಲೌಕಿಕವಾಗಿದೆ ಅಂದ ಮೇಲೆ ಕರ್ಮವೂ ಅಲೌಕಿಕವಾಗಿರಬೇಕಲ್ಲವೆ! ಸಾಧಾರಣವಾಗಬಾರದು. ಸಂಕಲ್ಪದಲ್ಲಿಯೇ ಪರಿಶೀಲನೆ ಮಾಡಿಕೊಳ್ಳಬೇಕು ಏಕೆಂದರೆ ಸಂಕಲ್ಪವೇ ಕರ್ಮದಲ್ಲಿಯೂ ಬರುತ್ತದೆ. ಒಂದು ವೇಳೆ ಸಂಕಲ್ಪವನ್ನು ಪರಿಶೀಲನೆ ಮಾಡಿಕೊಂಡು, ಪರಿವರ್ತನೆ ಮಾಡಿಕೊಳ್ಳುತ್ತೀರೆಂದರೆ ಕರ್ಮವು ಮಹಾನ್ ಆಗಿಬಿಡುತ್ತದೆ. ಇಡೀ ಕಲ್ಪದಲ್ಲಿಯೂ ಪ್ರಾಕ್ಟಿಕಲ್‌ನಲ್ಲಿ ಮಹಾನ್ ಆತ್ಮರು ತಾವೇ ಆಗಿದ್ದೀರಿ ಆದ್ದರಿಂದ ಸಂಕಲ್ಪದಲ್ಲಿಯೇ ಪರಿಶೀಲನೆ ಮತ್ತು ಪರಿವರ್ತನೆ ಮಾಡಿಕೊಳ್ಳಬೇಕು. ಸಾಧಾರಣತೆಯನ್ನು ಮಹಾನತೆಯಲ್ಲಿ ಪರಿವರ್ತನೆ ಮಾಡಿಕೊಳ್ಳಬೇಕು. ಒಳ್ಳೆಯದು.

**ವಿದಾಯದ ಸಮಯದಲ್ಲಿ.**

ಹೇಗೆ ಈಗ ನೀವು ನರ್ತಿಸುತ್ತಿರುವಿರೋ ಹಾಗೆಯೇ ಸದಾ ಖುಷಿಯಲ್ಲಿ ನರ್ತಿಸುತ್ತಾ ಇರಿ ಯಾವ ಪರಿಸ್ಥಿತಿ ಬಂದರೂ ಪರಿಸ್ಥಿತಿಯ ಮೇಲೆಯೂ ನರ್ತಿಸುತ್ತಾ ಇರಿ. ಸರ್ಪದ ಮೇಲೆಯೂ ನರ್ತಿಸುವ ಈ ಜಡ ಚಿತ್ರ ತಮ್ಮ ಸ್ಮೃತಿಚಿನ್ಹೆ ಆಗಿದೆ. ಯಾವ ಸಮಯದಲ್ಲಿ ಯಾವ ಪರಿಸ್ಥಿತಿ ಬಂದರೂ ಈ ಚಿತ್ರದ ನೆನಪು ಮಾಡಿಕೊಳ್ಳಿ ಪರಿಸ್ಥಿತಿ ರೂಪೀ ಸರ್ಪದ ಮೇಲೆಯೂ ಡ್ಯಾನ್ಸ್(ನರ್ತನೆ) ಮಾಡುವವರಾಗಿದ್ದೇವೆ. ಇದೇ ಸರ್ಪ ನಮ್ಮ ಕೊರಳಿನಲ್ಲಿ ಸಫಲತೆಯ ಮಾಲೆ ಹಾಕುತ್ತದೆ ಒಳ್ಳೆಯದು.

ಅವ್ಯಕ್ತ ಮುರಳಿ 16-02-1978.

***ಮಾಯೆ ಮತ್ತು ಪ್ರಕೃತಿಯ ಮುಖಾಂತರ ಸತ್ಕಾರವನ್ನು ಪ್ರಾಪ್ತಿ ಮಾಡಿಕೊಳ್ಳುವ ಆತ್ಮರೇ ಸರ್ವ ಶ್ರೇಷ್ಠ ಆತ್ಮರು***

ಒಂದೇ ಸಮಯದಲ್ಲಿ ತನು, ಮನ, ಧನ ಮತ್ತು ಮನಸಾ, ವಾಚಾ, ಕರ್ಮಣಾ ಎಲ್ಲಾ ವಿಧವಾದ ಸೇವೆಗಳನ್ನು ಜೊತೆ ಜೊತೆಯಲ್ಲಿ ಮಾಡುವುದರಿಂದ ಸಫಲತೆ ಸಹಜವಾಗಿ ಪ್ರಾಪ್ತಿಯಾಗುತ್ತದೆ. ಸದಾ ಆರೋಗ್ಯ, ಸದಾ ಸಂಪನ್ನ, ಸದಾ ಸಂತೋಷ ಈ ಮೂರು ಪ್ರಾಪ್ತಿಗಳು ವರ್ತಮಾನ ಪ್ರಾಪ್ತಿಯ ಲೆಕ್ಕದೊಂದಿಗೆ 21 ಜನ್ಮಗಳು ಲಭಿಸುತ್ತವೆ. "ಪ್ರಕೃತಿಯ ವಾತಾವರಣದ, ಪರಿಸ್ಥಿತಿಯ ಪ್ರಭಾವಕ್ಕೆ ವಶವಾಗಬಾರದು ಆದರೆ ನಿಮ್ಮ ಪ್ರಭಾವ ಪರಿಸ್ಥಿತಿಯ ಮೇಲೆ ಹಾಕುವವರಾಗಿ" ಎಂದು ಹೇಳುತ್ತಾ ತಂದೆ ಹೇಳಿರುವ ಮಹಾ ವಾಕ್ಯಗಳಿಂದ ಆತ್ಮಿಕ ಸ್ಥಿತಿಯಲ್ಲಿರುತ್ತಾ ನಾವು ಮಾಡಬೇಕಾಗಿರುವ ಸಂಕಲ್ಪಗಳು.

**ಆತ್ಮಿಕ ಸ್ಥಿತಿ/ಯೋಗ ಸ್ಥಿತಿ.**

ನಾನು ಆತ್ಮ ಆನಂದ ಸ್ವರೂಪ, ಶಿವ ಪರಮಾತ್ಮ ನನ್ನ ತಂದೆ.

1. ನಾನು ಒಂದೇ ಸಮಯದಲ್ಲಿ ತನು, ಮನ, ಧನ ಮತ್ತು ಮನಸಾ, ವಾಚಾ, ಕರ್ಮಣಾ ಎಲ್ಲಾ ವಿಧವಾದ ಸೇವೆಯನ್ನು ಜೊತೆ-ಜೊತೆಗೆ ಮಾಡಿ ಸಹಜವಾಗಿ ಸಫಲತೆಯನ್ನು ಪ್ರಾಪ್ತಿ ಮಾಡಿಕೊಂಡಿದ್ದೇನೆ.

2. ನಾನು ಸರ್ವಶಕ್ತಿಗಳ ಖಜಾನೆಯಿಂದ, ಸರ್ವಗುಣಗಳ ಖಜಾನೆಯಿಂದ, ಜ್ಞಾನ ಖಜಾನೆಯಿಂದ ಸಂಪನ್ನವಾಗಿ ಇರುವ ಸದಾ ಆರೋಗ್ಯವಂತನು.

3. ನಾನು ಸೂರ್ಯನು ಅಂಧಕಾರವನ್ನು ಪರಿವರ್ತನೆ ಮಾಡಿದ ಹಾಗೆ ಅಶಾಂತಿ, ನೀರಸ ವಾತಾವರಣದಲ್ಲಿ ಸಂತೋಷದ ಹೊಳಪನ್ನು ತಂದಿರುವ ಸಂತೋಷ ಸ್ವರೂಪ.

4. ಮೂರು ಪ್ರಾಪ್ತಿಗಳು (ಸದಾ ಆರೋಗ್ಯ, ಸದಾ ಸಂತೋಷ, ಸದಾ ಸಂಪನ್ನ) ನನ್ನ ಮಸ್ತಕ ಮತ್ತು ನಯನಗಳಿಂದ ಸದಾಕಾಲಕ್ಕಾಗಿ ಮತ್ತು ಅಖಂಡವಾಗಿ ಸ್ಪಷ್ಟವಾಗಿ ಕಾಣಿಸುತ್ತಿದೆ. ಮತ್ತು ಮೂರು ಪ್ರಾಪ್ತಿಗಳು ನನ್ನ ಜನ್ಮ ಸಿದ್ಧ ಅಧಿಕಾರ.

5. ನಾನು ನಿರಾಸೆ ಎಂಬ ಚಿತೆಯ ಮೇಲೆ ಕುಳಿತಿರುವ ಸರ್ವಾತ್ಮರನ್ನು ಮರುಜೀವ ಮಾಡಿಸಿ ಹೊಸ ಜೀವನದ ದಾನವನ್ನು ಕೊಟ್ಟು ಮೂರು ಪ್ರಾಪ್ತಿಗಳಿಂದ ಸಂಪನ್ನವಾಗಿ ತಯಾರು ಮಾಡಿದ್ದೇನೆ.

6. ನಾನು ಪ್ರಕೃತಿಯ, ವಾತಾವರಣದ ಪರಿಸ್ಥಿತಿಗಳಿಗೆ ಪ್ರಭಾವಕ್ಕೆ ವಶವಾಗದೆ ನನ್ನ ಪ್ರಭಾವ ಅವುಗಳ ಮೇಲೆ ಹಾಕುವ ಕಮಲ ಪುಷ್ಪ ಸಮಾನ ಸ್ವರೂಪ.

7. 'ನಾನು ಮೊದಲ ನಂಬರ್ ನಲ್ಲಿ ಬಂದು ತೋರಿಸುತ್ತೇನೆ' ಎಂಬ ಲಕ್ಷ್ಯ ವನ್ನು ಇಟ್ಟುಕೊಂಡು ಲಕ್ಷ್ಯದೊಂದಿಗೆ ಲಕ್ಷಣಗಳನ್ನು ಕೂಡ ಧಾರಣೆ ಮಾಡಿರುವ ಬಾಪ್‌ಸಮಾನ ಸ್ವರೂಪ.